ಕ್ರ. ಸಂ.	ಕಾಮಗಾರಿಯ ಹೆಸರು	ಶೀರ್ಷಿಕೆ	ಅಂದಾಜು ಮೊತ್ತ	ಷರಾ
1	ತೆಂಕಕಾರಂದೂರು ಎಂಬಲ್ಲಿ ಕಿಂಡಿಅಣೆಕಟ್ಟೆ ನಿರ್ಮಾಣ	4702-ಅಣೆಕಟ್ಟೆ	37.00	ಕೆಲವು ಮಂದಿ ಸಾರ್ವಜನಿಕರ ಪ್ರತಿಭಟನೆಯಿಂ-ದ ಕಾಮಗಾರಿ ಪ್ರಾರಂಭಿಸಲು ಸಾಧ್ಯವಾಗಿಲ್ಲ.
2	ಕಡಿರುದ್ಯಾವರ ಗ್ರಾಮದ ಒಳಂಬ್ರಎಂಬಲ್ಲಿ ಕಿಂಡಿ ಅಣೆಕಟ್ಟೆ ನಿರ್ಮಾಣ	-ಅದೇ-	21.00	ಕಾಮಗಾರಿಯು ಮುಗಿಯುವ ಹಂತದಲ್ಲಿದೆ.
3.	ಮುಂಡಾಜ್ ಕಿಂಡಿ ಅಣೆಕಟೆಯ ಅಭಿವೃದ್ದಿ ಕಾಮಗಾರಿ	-ಅದೇ-	4.00	ಕಾಮಗಾರಿ ಪ್ರಾರಂಭಿಸಬೇಕು.
4.	ರೈತ ಕಾಯಕಕೆರೆ ಯೋಜನೆಯಡಿ ಗುರುವಾಯನ ಕೆರೆ ಅಭಿವೃದ್ದಿ	4702-ರೈತ ಕಾಯಕ ಕೆರೆ	7.00	ಟೆಂಡರ್ ಅನುಮೋದನೆ ಪರಿಶೀಲನೆಯಲಿದ್ದು ಕಾಮಗಾರಿ ಪ್ರಾರಂಭಿಸಬೇಕಾಗಿದೆ.

ಬೆಳ್ತಂಗಡಿ ಕ್ಷೇತ್ರದ ಪೊಲೀಸ್ ಠಾಣೆಗಳ ಸಿಬ್ಬಂದಿ ವರ್ಗದವರಿಗೆ ವಸತಿ ಗೃಹಗಳ ವ್ಯವಸ್ಥೆ

166(196) ಶ್ರೀ ಪ್ರಭಾಕರ ಬಂಗೇರ .ಕೆ(ಬೆಳ್ತಂಗತಿ): ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ. ಬೆಳ್ತಂಗಡಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಪೊಲೀಸ್ ಠಾಣೆಗಳ ಎಲ್ಲಾ ಪೊಲೀಸ್ ಸಿಬಂದಿ ವರ್ಗದವರಿಗೆ ವಸತಿ ವ್ಯವಸ್ಥೆ ಇಲ್ಲದಿರುವುದನ್ನು ಸರ್ಕಾರವು ಗಮನಿಸಿದೆಯೇ: ಗಮನಿಸಿದ್ದಲ್ಲಿ ಕೊರತೆ ಇರುವ ವಸತಿ ಗೃಹಗಳನ್ನು ಯಾವಾಗ ಒದಗಿಸಿಕೊಡಲಾಗುವುದು.

ಆ. ಬೆಳ್ತಂಗಡಿ ತಾಲ್ಲೂಕಿನ ಅಗ್ನಿಶಾಮಕ ದಳದ ಕಛೇರಿಗೆ ಸ್ವಂತ ಕಟ್ಟಡ ಹಾಗೂ ಸಿಬ್ಬಂದಿ ವರ್ಗದವರಿಗೆ ವಸತಿಗೃಹ ಸೌಲಭ್ಯಗಳು ಇಲ್ಲವಾಗಿದ್ದು ಸದರಿ ಸೌಲಭ್ಯವನ್ನು ಒದಗಿಸಿಕೊದಲು ಕ್ರಮ ಜರುಗಿಸಲಾಗುವುದೆ.

ಶ್ರೀ ಮಲ್ಲಿಕಾರ್ಜುನಖರ್ಗೆ (ಗೃಹ ಸಚಿವರು)

ಅ. ಬೆಳ್ತಂಗಡಿ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿನ ಎಲ್ಲಾ ಪೊಲೀಸ್ ಸಿಬ್ಬಂದಿವರ್ಗದವರಿಗೆ ವಸತಿ ಗೃಹ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. 2003-04ನೇ ಸಾಲಿನ ಆರ್ಥಿಕ ಯೋಜನೆಯಡಿಯಲ್ಲಿ ಬಿಡುಗಡೆ ಆಗಿರುವ ಅನುದಾನದಲ್ಲಿ ಬೆಳ್ತಂಗಡಿ ಮತ್ತು ವೇಣೂರು ಪೊಲೀಸ್ ಠಾಣೆಗಳ ವಸತಿ ರಹಿತ ಪೊಲೀಸ್ ಸಿಬ್ಬಂದಿಗಳಿಗೆ ವಸತಿ ಸೌಲಭ್ಯವನ್ನು ಒದಗಿಸುವ ಬಗ್ಗೆ ಪರಿಶೀಲಿಸಲಾಗುತ್ತದೆ.ಬೆಳ್ತಂಗಡಿ ತಾಲ್ಲೂಕು ಕಸಬಾಸರ್ವೆ ನಂ.91 ಎ2 ರಲ್ಲಿ 2.73 ಎಕರೆ ಜಮೀನು ಲಭ್ಯವಿರುತ್ತದೆ. ವೇಣೂರು ಹೋಬಳಿಯ ಸರ್ವೆನಂ. 26:1 ಎಸ್‌ರಲ್ಲಿ ಎಕರೆ

ಜಮೀನು ಲಭ್ಯವಿದ್ದು ಸದರಿ ಜಮೀನುಗಳಲ್ಲಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳುವ ಬಗ್ಗೆ ಪರಿಶೀಲಿಸಲಾಗುತ್ತದೆ.

ಆ. ದಕ್ಷಿಣ ಕನ್ನಡ ಜಿಲ್ಲೆ ಬೆಳ್ತಂಗಡಿ ಅಗ್ನಿಶಾಮಕ ಠಾಣೆಗೆ ಸ್ವಂತ ಕಟ್ಟಡ ನಿರ್ಮಿಸಲು ಕಂದಾಯ ಇಲಾಖೆಯವರು ಕುಬೆಟ್ಟು ಗ್ರಾಮದ ಸರ್ವೆನಂ. 10-1ಮತ್ತು 3 ಮತ್ತು 169-2 ಪಿ 3 ರಲ್ಲಿ 2 ಎಕರೆ 86 ಸೆಂಟ್ಸ್ ಜಾಗವನ್ನು ಮಂಜೂರು ಮಾಡಿರುತ್ತಾರೆ. ಈ ಜಾಗವನ್ನು ದಿನಾಂಕ 27-7-99 ರಂದು ಅಗ್ನಿಶಾಮಕ ಇಲಾಖೆಯ ವಶಕ್ಕೆ ಪಡೆಯಲಾಗಿದೆ. 2002-03ನೇ ಸಾಲಿನಲ್ಲಿ ಒದಗಿಸಲಾದ 11ನೇ ಹಣಕಾಸು ಆಯೋಗದ ವಿಶೇಷ ಅನುಧಾನ ರೂ 241.00 ಲಕ್ಷಗಳಲ್ಲಿ ಪೂ 27.25 ಲಕ್ಷಗಳನ್ನು ಬಳಸಿ ಠಾಣೆಯ ಕಟ್ಟಡ ನಿರ್ಮಾಣಗೊಳಿಸಲು ಲೋಕೋಪಯೋಗಿ ಇಲಾಖೆಯಿಂದ ಅಂದಾಜು ಪಟ್ಟಿ ಪಡೆಯಲಾಗಿದ್ದು ಈ ನಿರ್ಮಾಣಕ್ಕೆ ಆಡಳಿತಾತ್ಮಕ ಮಂಜೂರಾತಿ ನೀಡುವುದನ್ನು ಪರಿಶೀಲಿಸಲಾಗುತ್ತಿದೆ. ಇದಲ್ಲದೆ 13 ವಸತಿಗೃಹಗಳನ್ನು ಮೊದಲನೆ ಹಂತವಾಗಿ ನಿರ್ಮಿಸಲು ರೂ 65.00 ಲಕ್ಷಗಳ ಅಗತ್ಯವಿದ್ದು ಈ ಕಾಮಗಾರಿಗಳನ್ನು 2003-2004ನೇ ಸಾಲಿನ ಆಯವ್ಯಯ ಅಪೆಂಡಿಕ್ಸ್ 'ಇ' ನಲ್ಲಿ ಅನುದಾನ ದೊಂದಿಗೆ ಸೇರ್ಪಡೆ ಮಾಡುವ ಬಗ್ಗೆ ಕ್ರಮ ಕೈಗೊಳ್ಳಲಾಗಿದೆ.

ಯಲಹಂಕ ನಗರಸಭೆ ವ್ಯಾಪ್ತಿಗೆ ಬರುವ ಹೊಸ ಬಡಾವಣೆಯಲ್ಲಿ ಉದ್ಯಾನವನದ ಅಭಿವೃದ್ಧಿ

167(346) ಶ್ರೀ ಪೂಜಾರ್ ಪಿ.ಹೆಚ್(ಬಾಗಲಕೋಟೆ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಯಲಹಂಕ ನಗರಸಭೆ ವ್ಯಾಪ್ತಿಗೆ ಬರುವ ಹೊಸ ಬಡಾವಣೆಯ 707 ಗೃಹಗಳ ಸಮುಚ್ಚಯದಲ್ಲಿರುವ ಉದ್ಯಾನವನಗಳ ಸಂಖ್ಯೆ ಎಷ್ಟು? (ಸರ್ವೆ ಹಾಗೂ ನಿವೇಶನ ಸಂಖ್ಯೆಯ ಸಮೇತ ವಿವರ ನೀಡುವುದು)

ಆ. ಸದರಿ ಪ್ರದೇಶದಲ್ಲಿ ಯಾವ ಉದ್ಯಾನವನ್ನು ನಗರಸಭೆಯು ಅಭಿವೃದ್ಧಿ ಪಡಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ. ಹಾಗಿದ್ದಲ್ಲಿ ಸರ್ಕಾರಿ ಶಾಲೆಯ ಹತ್ತಿರ ಇರುವ ಶ್ರೀ ಗಣಪತಿ ದೇವಸ್ಥಾನದ ಉದ್ಯಾನವನ್ನು ಆತ್ಯಾಧುನಿಕವಾಗಿ ಅಭಿವೃದ್ಧಿ ಗೊಳಿಸಲು ಕ್ರಮ ಜರುಗಿಸಲಾಗುವುದೆ?

ಈ. ಇಲ್ಲದಿದ್ದಲ್ಲಿ ಸದರಿ ಉದ್ಯಾನವನದ ಅಭಿವೃದ್ಧಿಗಾಗಿ ಅರಣ್ಯ ಇಲಾಖೆ ಅಥವಾ ತೋಟಗಾರಿಕೆ ಇಲಾಖೆಯವರಿಗೆ ವಹಿಸಿ ಕೊಡಲಾಗುವುದೇ?

ಶ್ರೀ ಡಿ.ಕೆ ಶಿವಕುಮಾರ್ (ನಗರಾಭಿವೃದ್ಧಿ ಸಚಿವರು)

ಅ. ಚಿಕ್ಕ ಉದ್ಯಾನವನಗಳು :9 ದೊಡ್ಡ ಉದ್ಯಾನವನಗಳು : 2 ನಕ್ಷೆಯಲ್ಲಿ ನಿವೇಶನ ಸಂಖ್ಯೆ ಗುರುತಿಸರುವುದಿಲ್ಲ. ದೊಡ್ಡ ಉದ್ಯಾನವನಗಳ ನಿವೇಶನ ಸಂಖ್ಯೆ:

1. 48:48ಎ, ಗಣಪತಿ ದೇವಸ್ಥಾನ ಇರುವ ಜಾಗ
2. 49:49ಎ

ಆ. ಇಲ್ಲ.